# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **518** |
| ಸದಸ್ಯರ ಹೆಸರು | : | ಶ್ರೀ .ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 24-09-2020 |
| ಉತ್ತರಿಸುವ ಸಚಿವರು | : | ಮುಖ್ಯಮಂತ್ರಿಗಳು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಗೃಹ ಬಳಕೆಗೆ ಅಥವಾ ಕೈಗಾರಿಕೆಗಳಿಗೆ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದುಕೊಳ್ಳುತ್ತಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಅಕ್ರಮ ವಿದ್ಯುತ್ ಸಂಪರ್ಕ ಪಡೆದುಕೊಳ್ಳುತ್ತಿರುವ ಹಾಗೂ ವಿದ್ಯುತ್ ಕಳ್ಳತನಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br>• ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಪೊಲೀಸ್ ಅಧೀಕ್ಷಕರ ನೇತೃತ್ವದಲ್ಲಿ ವಿದ್ಯುತ್ ಕಳ್ಳತನ ಹಾಗೂ ದುರುಪಯೋಗದ ಪ್ರಕರಣಗಳನ್ನು ತಡೆಗಟ್ಟಲು ಒಬ್ಬ ಡಿ.ವೈ.ಎಸ್.ಪಿ, ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಹಾಗೂ ಕಂಪನಿ ವ್ಯಾಪ್ತಿಯ ಪ್ರತಿ ಜಿಲ್ಲೆಯಲ್ಲಿ ಪೊಲೀಸ್ ಠಾಣೆಗಳನ್ನು ರಚಿಸಿದ್ದು ಒಬ್ಬ ಪೊಲೀಸ್ ನಿರೀಕ್ಷಕರು/ಪೊಲೀಸ್ ಉಪನಿರೀಕ್ಷಕರು ರವರ ಜೊತೆಯಲ್ಲಿ ಒಬ್ಬ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ ಸಹಾಯಕ ಇಂಜಿನಿಯರ್(ವಿ) ಇವರುಗಳು ಜಂಟಿಯಾಗಿ ವಿದ್ಯುತ್ ಸ್ಥಾವರಗಳನ್ನು ಪ್ರತಿನಿತ್ಯ ತಪಾಸಣೆ ನಡೆಸಿ ವಿದ್ಯುತ್ ಕಳ್ಳತನ ಮತ್ತು ದುರುಪಯೋಗದ ಪ್ರಕರಣಗಳನ್ನು ಪತ್ತೆ ಹಚ್ಚಿ ಕಾನೂನಿನಲ್ಲಿರುವ ನಿಯಮದಂತೆ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ. ಇದರಿಂದ ಕಂಪನಿ ವ್ಯಾಪ್ತಿಯಲ್ಲಿ ನಡೆಯುತ್ತಿದ್ದ ವಿದ್ಯುತ್ ಕಳ್ಳತನ/ದುರುಪಯೋಗ ಗಮನಾರ್ಹವಾಗಿ ಹತೋಟಿಯಲ್ಲಿರುತ್ತದೆ.<br>• ವಿದ್ಯುತ್ ಕಳ್ಳತನ ಪ್ರಕರಣದ ಆರೋಪಿತರ ವಿರುದ್ಧ Electricity Act -2003 ರ ರೀತ್ಯಾ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.<br>• ವಿದ್ಯುತ್ ಕಳ್ಳತನದಲ್ಲಿ ಭಾಗಿಯಾಗಿರುವ ಆರೋಪಿತರು Electricity Act -2003 ರ ರೀತ್ಯಾ ಮೊದಲನೆಯ ಅಪರಾಧದಿಂದ ವಿಮುಕ್ತಿ ಹೊಂದಲು ದಂಡ ಶುಲ್ಕವನ್ನು ಪಾವತಿಸಲು ಮೇಲಿನ ಕಾಯ್ದೆಯಡಿ ಅವಕಾಶವಿರುತ್ತದೆ. ಅದೇ ಸ್ಥಾವರದಲ್ಲಿ ಎರಡನೇ ಬಾರಿ ವಿದ್ಯುತ್ ಕಳ್ಳತನ ಪ್ರಕರಣ ದಾಖಲಾದಲ್ಲಿ ಆರೋಪಿತರಿಗೆ ದಂಡಶುಲ್ಕವನ್ನು ಪಾವತಿಸುವ ಅವಕಾಶವಿರುವುದಿಲ್ಲ. ಸದರಿ ಅಪಾದಿತರ ವಿರುದ್ಧ ವಿದ್ಯುತ್ ಕಳ್ಳತನ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ದೋಷರೋಪಣ ಪಟ್ಟಿ ಸಲ್ಲಿಸಲಾಗುತ್ತದೆ ಹಾಗೂ ದಂಡ ಮತ್ತು ಶಿಕ್ಷೆಗೆ ಗುರಿಯಾಗುತ್ತಾರೆ.<br>• ವಿದ್ಯುತ್ ಕಳುವು ಪ್ರಕರಣಗಳನ್ನು ಪತ್ತೆ ಹಚ್ಚುವ ಸಲುವಾಗಿ ಲೆವಲ್-1,2,3,4 ಎಂದು ವಿಂಗಡಿಸಿ ಪ್ರತಿಯೊಂದು ವಿಭಾಗಕ್ಕೂ ಪ್ರತ್ಯೇಕವಾಗಿ ಗುರಿಯನ್ನು ನಿಗದಿಪಡಿಸಲಾಗಿದೆ. ಮೀಟರ್ ರೀಡರ್, ಲೈನ್‌ಮ್ಯಾನ್ ಹಾಗೂ ಕಾರ್ಯ ಮತ್ತು ಪಾಲನಾ ವಿಭಾಗದ ಇಂಜಿನಿಯರ್ ರವರೊಂದಿಗೆ ಸಂಪರ್ಕವಿಟ್ಟುಕೊಂಡು ಮಾಹಿತಿ ಸಂಗ್ರಹಿಸಲಾಗುತ್ತಿದೆ.<br>• ವಿದ್ಯುತ್ ಕಳ್ಳತನ/ಸೋರಿಕೆ/ದುರುಪಯೋಗ ಪ್ರಕರಣಗಳನ್ನು ಪತ್ತೆ ಹಚ್ಚುವ ಸಲುವಾಗಿ ಸ್ಥಾವರಗಳ ವಿವರಗಳು, ವಿದ್ಯುತ್ ಬಳಕೆಯ ವಿವರಗಳನ್ನು ವೈಜ್ಞಾನಿಕ ರೀತಿಯಲ್ಲಿ ಪರಿಶೀಲಿಸಿ ಅನಿರೀಕ್ಷಿತ/ಸಾಮೂಹಿಕ ದಾಳಿ ನಡೆಸಿ ವಿದ್ಯುತ್ ಕಳುವು ಪ್ರಕರಣಗಳನ್ನು ಪತ್ತೆಹಚ್ಚಲಾಗುತ್ತಿದೆ. |

| | | |
|---|---|---|
| | | • ವಿದ್ಯುತ್ ಕಳ್ಳತನ/ಸೋರಿಕೆ/ದುರುಪಯೋಗ ಪ್ರಕರಣಗಳಲ್ಲಿ ಸಾರ್ವಜನಿಕರು ತೊಡಗದಂತೆ ದಿನ ಪತ್ರಿಕೆಗಳಲ್ಲಿ ಹಾಗೂ ಟಿ.ವಿ/ಎಲೆಕ್ಟ್ರಾನಿಕ್ ಮೀಡಿಯಾಗಳ ಮೂಲಕ ಪ್ರಕಟಣೆ ನೀಡಲಾಗಿದೆ.<br>• ಸಾರ್ವಜನಿಕರು/ವಿದ್ಯುತ್ ಗ್ರಾಹಕರು ವಿದ್ಯುತ್ ಕಳ್ಳತನದ ಪ್ರಕರಣಗಳನ್ನು ಗುರುತಿಸಿದಾಗ ಕಾನೂನು ರೀತ್ಯಾ ಕ್ರಮ ಜರುಗಿಸಲು ಅದರ ಮಾಹಿತಿಯನ್ನು ಜಾಗೃತದಳ ಅಧಿಕಾರಿಗಳಿಗೆ ನೀಡಲು ಕೋರಿ ಇಲಾಖಾ ಮೊಬೈಲ್ ಸಂಖ್ಯೆಗಳನ್ನು ಸ್ಥಳೀಯ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗಿದೆ.<br>• ಮಾಹಿತಿದಾರರ ಹೆಸರು ಹಾಗೂ ವಿಳಾಸವನ್ನು ಗೌಪ್ಯವಾಗಿ ಇಡಲು ಕ್ರಮವಹಿಸಲಾಗುತ್ತಿದೆ ಪ್ರಮುಖ ಕಛೇರಿಗಳಲ್ಲಿಯೂ ಸಹ ಇದರ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಮೇಲಿನ ವಿವರಗಳನ್ನು ಆ ಕಛೇರಿಯ ಆವರಣದಲ್ಲಿ ಒಂದು ಫಲಕದಲ್ಲಿ ನಮೂದಿಸಲಾಗಿದೆ.<br>• ಗ್ರಾಹಕರಿಗೆ ನೀಡಲಾಗುತ್ತಿರುವ ವಿದ್ಯುತ್ ಬಿಲ್ಲಿನ ಹಿಂಬದಿಯ ಪುಟದಲ್ಲಿ ವಿದ್ಯುತ್ ಕಳ್ಳತನಕ್ಕೆ ಕಠಿಣ ಶಿಕ್ಷೆ ಆಗುತ್ತದೆಂದೂ ಸಹ ಪ್ರಕಟಿಸಿ ವಿದ್ಯುತ್ ಕಳ್ಳತನದ ಪ್ರಕರಣದ ಬಗ್ಗೆ ಮಾಹಿತಿಯನ್ನು ನೀಡಲು ಸಂಬಂಧಿಸಿದ ಜಾಗೃತದಳ ಇಂಜನಿಯರುಗಳ ಇಲಾಖಾ ಮೊಬೈಲ್ ಸಂಖ್ಯೆಯನ್ನೂ ಸಹ ಮುದ್ರಣ ಮಾಡಿ ವಿತರಿಸಲಾಗುತ್ತಿದೆ.<br>• ಪರಿವರ್ತಕಗಳಿಗೆ ಮೀಟರ್‌ಗಳನ್ನು ಅಳವಡಿಸಿ ಅವುಗಳ ಮುಖಾಂತರ ವಿದ್ಯುತ್ ಕಳುವು ಪ್ರಕರಣಗಳನ್ನು ಪತ್ತೆ ಹಚ್ಚಲು ಕ್ರಮ ಕೈಗೊಳ್ಳಲಾಗುತ್ತಿದೆ.<br>• ಗ್ರಾಹಕರ ವಿದ್ಯುತ್ ಬಳಕೆಯ ವಿವರಗಳನ್ನು ಅಧ್ಯಯನ ಮಾಡಿ, ಅಲ್ಲಿಯೂ ಕೂಡ ವಿದ್ಯುತ್ ಕಳುವು ಪ್ರಕರಣಗಳನ್ನು ಪತ್ತೆ ಹಚ್ಚಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಆ) | ಕ್ರಮ ಕೈಗೊಂಡಿದ್ದಲ್ಲಿ, ಇಲ್ಲಿಯವರೆಗೆ ದಂಡದ ರೂಪದಲ್ಲಿಇಂತಹ ಅಕ್ರಮಗಳಿಂದ ವಸೂಲಾದ ಒಟ್ಟು ಮೊತ್ತವೆಷ್ಟು; | ರಾಜ್ಯದಲ್ಲಿ ಜಾಗೃತದಳದಿಂದ, ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದುಕೊಂಡ ಗೃಹ ಬಳಕೆ ಹಾಗೂ ಕೈಗಾರಿಕೆಗಳಿಗೆ ದಾಖಲಿಸಿದ ಪ್ರಕರಣಗಳು ಮತ್ತು ವಸೂಲು ಮಾಡಲಾದ ದಂಡದ ಮೊತ್ತದ ವಿದ್ಯುತ್ ಸರಬರಾಜು ಕಂಪನಿವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಇ) | ದಂಡ ವಿಧಿಸುವ ಬದಲು ಬೆಸ್ಕಾಂ ಸಿಬ್ಬಂದಿಗಳು ಅಕ್ರಮ ಎಸಗಿದವರನ್ನು ರಕ್ಷಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸಿಬ್ಬಂದಿಯ ಮೇಲೆ ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ? (ಮಾಹಿತಿ ನೀಡುವುದು) | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ಸಿಬ್ಬಂದಿಗಳು, ಅಕ್ರಮ ಎಸಗಿದವರನ್ನು ರಕ್ಷಿಸಿದ ಪ್ರಕರಣಗಳು ಕಂಡುಬಂದಲ್ಲಿ, ಕಾನೂನು ರೀತ್ಯಾ ಶಿಸ್ತು ಕ್ರಮ ಜರುಗಿಸಲಾಗುವುದು. |

**ಸಂಖ್ಯೆ:** ಎನರ್ಜಿ 191 ಇಬಿಎಸ್ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಹರೀಶ್ ಕುಮಾರ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 518ಕ್ಕೆ

ಅನುಬಂಧ

ರಾಜ್ಯದಲ್ಲಿ ಜಾಗೃತದಳದಿಂದ, ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದುಕೊಂಡ ಗೃಹ ಬಳಕೆ ಹಾಗೂ ಕೈಗಾರಿಕೆಗಳಿಗೆ ದಾಖಲಿಸಿದ ಪ್ರಕರಣಗಳು ಮತ್ತು ವಸೂಲು ಮಾಡಲಾದ ದಂಡದ ಮೊತ್ತದ ವಿದ್ಯುತ್ ಸರಬರಾಜು ಕಂಪನಿವಾರು ವಿವರಗಳು;

| ವರ್ಷ | ಗೃಹ ಬಳಕೆ ಸ್ಥಾವರಗಳು | | ಕೈಗಾರಿಕಾ ಸ್ಥಾವರಗಳು | |
|---|---|---|---|---|
| | ಸಂಖ್ಯೆ | ವಸೂಲು ಮಾಡಲಾದ ದಂಡದ ಮೊತ್ತ (ರೂ. ಲಕ್ಷಗಳಲ್ಲಿ) | ಸಂಖ್ಯೆ | ವಸೂಲು ಮಾಡಲಾದ ದಂಡದ ಮೊತ್ತ (ರೂ. ಲಕ್ಷಗಳಲ್ಲಿ) |
| ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ | | | | |
| 2019–20 | 1024 | 259.38 | 183 | 149.00 |
| 2020–21 (ಆಗಸ್ಟ್–2020 ರವರೆಗೆ) | 311 | 30.33 | 30 | 48.92 |
| ಒಟ್ಟು | **1335** | **289.71** | **213** | **197.92** |
| ಮಂಗಳೂರು ವಿದ್ಯುತ್ ಸರಬರಾಜು ಕಂಪನಿ | | | | |
| 2019–20 | 81 | 13.65 | 20 | 2.06 |
| 2020–21 (ಆಗಸ್ಟ್–2020 ರವರೆಗೆ) | 21 | 3.09 | 01 | 0.14 |
| ಒಟ್ಟು | **102** | **16.74** | **21** | **2.20** |
| ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ | | | | |
| 2019–20 | 699 | 72.32 | 75 | 58.19 |
| 2020–21 (ಆಗಸ್ಟ್–2020 ರವರೆಗೆ) | 159 | 5.91 | 11 | 3.38 |
| ಒಟ್ಟು | **858** | **78.23** | **86** | **61.57** |
| ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ | | | | |
| 2019–20 | 1627 | 82.01 | 76 | 24.07 |
| 2020–21 (ಆಗಸ್ಟ್–2020 ರವರೆಗೆ) | 269 | 9.69 | 13 | 1.58 |
| ಒಟ್ಟು | **1896** | **91.70** | **89** | **25.65** |
| ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ | | | | |
| 2019–20 | 7629 | 387.27 | 2062 | 188.06 |
| 2020–21 (ಆಗಸ್ಟ್–2020 ರವರೆಗೆ) | 1469 | 218.00 | 401 | 123.37 |
| ಒಟ್ಟು | **9098** | **605.27** | **2463** | **311.43** |
| ರಾಜ್ಯದ ಒಟ್ಟು | | | | |
| 2019–20 | 11060 | 814.63 | 2416 | 421.38 |
| 2020–21 (ಆಗಸ್ಟ್–2020 ರವರೆಗೆ) | 2229 | 267.02 | 456 | 177.39 |
| ಒಟ್ಟಾರೆ | **13289** | **1081.65** | **2872** | **598.77** |